ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 2, September-October, 2024, Pp. 32-36
©*IIMRD*, Mysuru
IIMRD JOURNALS
www.iimrd.com

# ದುರ್ಗದ ಸ್ವರ್ಗ ಜೋಗಿಮಟ್

**ಧೀರಜ್ ಚಂದ್ರ ಬಿ. ಯು[1] ಮತ್ತು ಡಾ. ಎಸ್. ನಾಗರತ್ನಮ್ಮ[2]**

[1] ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

[2] ಹಿರಿಯ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**ಸಾರಾಂಶ: (Abstract)**

*ಪ್ರವಾಸೋದ್ಯಮ ಇತ್ತೀಚಿನ ದಿನಗಳಲ್ಲಿ ಒಂದು ಬೃಹತ್ ಉದ್ಯಮವಾಗಿ ಬೆಳೆಯುತ್ತಿದೆ. ಒಂದು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸುವ, ಸ್ಥಳೀಯ ಆರ್ಥಿಕ ಅಭಿವೃದ್ಧಿಯನ್ನು ರೂಪಿಸುವ, ಸ್ಥಳೀಯ ಮೂಲಸೌಕರ್ಯಗಳನ್ನು ಅಭಿವೃದ್ಧಿಗೊಳಿಸುವಲ್ಲಿ, ಜೊತೆಗೆ ಸ್ವಾಭಾವಿಕ ಪರಿಸರ ಮತ್ತು ಸಾಂಸ್ಕೃತಿಕ ಸಂಪತ್ತನ್ನು ಹೆಚ್ಚಿಸುವ ಮೂಲಕ ಬಡತನವನ್ನು ಸಹ ನಿವಾರಿಸುತ್ತಿರುವ ನಿಟ್ಟಿನಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತಿದೆ. ಪ್ರವಾಸೋದ್ಯಮದ ಹಲವು ವಿಧಗಳಲ್ಲಿ ನೈಸರ್ಗಿಕ ಪ್ರವಾಸೋದ್ಯಮ ಒಂದು ಉತ್ತಮ ಮನೋರಂಜನ ಪ್ರವಾಸೋದ್ಯಮವಾಗಿದೆ. ಪ್ರಸ್ತುತ ಲೇಖನದಲ್ಲಿ ಚಿತ್ರದುರ್ಗ ಜಿಲ್ಲೆಯ ಜೋಗಿಮಟ್ ಕುರಿತು ನೈಸರ್ಗಿಕ ಪ್ರವಾಸೋದ್ಯಮದ ನೆಲೆಯಾಗಿ ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ.*

**ಮುಖ್ಯಪದಗಳು (Keywords):** ಕರ್ನಾಟಕ ಇತಿಹಾಸ, ಪರಿಸರ ಪ್ರವಾಸೋದ್ಯಮ, ಚಿತ್ರದುರ್ಗ, ಜೋಗಿಮಟ್.

## ಪೀಠಿಕೆ

ಕರ್ನಾಟಕ ಪಾರಂಪರಿಕ ಮತ್ತು ಸಾಂಸ್ಕೃತಿಕ ನೆಲೆಗಳಿಗೆ ಜನಪ್ರಿಯವಾಗಿದೆ. ಕರ್ನಾಟಕದ ಮೈಸೂರು, ತಲಕಾಡು, ಬೇಲೂರು, ಹಳೇಬೀಡು, ಹಂಪಿ, ಬಾದಾಮಿ, ಪಟ್ಟದಕಲ್ಲು, ಐಹೊಳೆ, ಇನ್ನಿತರೆ ಸ್ಥಳಗಳು ಧಾರ್ಮಿಕ ಮತ್ತು ಪಾರಂಪರಿಕ ನೆಲೆಗಳಾದರೆ, ಚಾಮರಾಜನಗರ, ಚಿಕ್ಕಮಗಳೂರು, ಕುದುರೆಮುಖ, ಬಂಡೀಪುರ, ನಾಗರಹೊಳೆ ಮತ್ತು ಜೋಗಿಮಟ್ ನೈಸರ್ಗಿಕ ಮತ್ತು ಪರಿಸರ ಪ್ರವಾಸೋದ್ಯಮದ ನೆಲೆಗಳಾಗಿವೆ. ಕರ್ನಾಟಕವು ದೇಶದ ಪ್ರವಾಸೋದ್ಯಮ ಕ್ಷೇತ್ರದಲ್ಲಿ 8ನೇ ಸ್ಥಾನವನ್ನು ಪಡೆದಿದೆ.

## ಚಿತ್ರದುರ್ಗಜಿಲ್ಲೆಯ ಪರಿಚಯ

ಕರ್ನಾಟಕ ರಾಜ್ಯದ ಜಿಲ್ಲೆಗಳಲ್ಲಿ ಚಿತ್ರದುರ್ಗ ಜಿಲ್ಲೆಯೂ ಒಂದು. ಈ ಜಿಲ್ಲೆಯು ರಾಜ್ಯದ ವಿಸ್ತೀರ್ಣದಲ್ಲಿ 7ನೇ ಸ್ಥಾನ ಪಡೆದಿದೆ. ಉತ್ತರದಲ್ಲಿ ಬಳ್ಳಾರಿ ಜಿಲ್ಲೆ, ಪೂರ್ವ ದಿಕ್ಕಿನಲ್ಲಿ ಅನಂತಪುರ ಜಿಲ್ಲೆ, ಆಗ್ನೇಯ ದಿಕ್ಕಿನಲ್ಲಿ ತುಮಕೂರು ಜಿಲ್ಲೆ, ಪಶ್ಚಿಮದಲ್ಲಿ ಶಿವಮೊಗ್ಗ ಜಿಲ್ಲೆ, ವಾಯುವ್ಯದಲ್ಲಿ ಧಾರವಾಡ ಜಿಲ್ಲೆ,

*Please cite this article as:* ಧೀರಜ್ ಚಂದ್ರ ಬಿ. ಯು ಮತ್ತು ಎಸ್. ನಾಗರತ್ನಮ್ಮ. (2024). ದುರ್ಗದ ಸ್ವರ್ಗ ಜೋಗಿಮಟ್. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(2). ಪು.ಸಂ.* 32–36

ನೈರುತ್ಯದಲ್ಲಿ ಚಿಕ್ಕಮಗಳೂರು ಜಿಲ್ಲೆಗಳಿಂದ ಸುತ್ತುವರಿಯಲ್ಪಟ್ಟಿದೆ. ಈ ಜಿಲ್ಲೆಯು ಹೊಸದುರ್ಗ, ಹೊಳಲ್ಕೆರೆ, ಮೊಳಕಾಲ್ಮೂರು, ಚಳ್ಳಕೆರೆ, ಹಿರಿಯೂರು ತಾಲೂಕುಗಳನ್ನು ಹೊಂದಿದೆ.

ಪ್ರವಾಸೋದ್ಯಮ ತಾಣಗಳು ಕೆಲವು ಧಾರ್ಮಿಕ, ಆಧ್ಯಾತ್ಮಿಕ ಭಾವನೆಯಿಂದ ಆಕರ್ಷಿಸಿದರೆ, ಮತ್ತೆ ಕೆಲವು ಸ್ಥಳಗಳು ವಿಹಾರಧಾಮಗಳಾಗಿ, ಸಾಹಸ ಪ್ರವಾಸೋದ್ಯಮ ನೆಲೆಗಳಾಗಿ ಕೆಲವು ಶಿಕ್ಷಣ ಕ್ಷೇತ್ರಗಳಾಗಿ ಪ್ರವಾಸಿಗರನ್ನು ಆಕರ್ಷಿಸುತ್ತವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಹಲವಾರು ಪ್ರವಾಸೋದ್ಯಮ ನೆಲೆಗಳನ್ನು ಕಾಣಬಹುದು. ಅವುಗಳಲ್ಲಿ ಹಾಲುರಾಮೇಶ್ವರ, ಮಲ್ಲಾಡಿಹಳ್ಳಿಗಳೂ ಧಾರ್ಮಿಕ ಮತ್ತು ಆಧ್ಯಾತ್ಮಿಕವಾಗಿ ಆಕರ್ಷಣೆಯಾದರೆ, ಕೊಂಡಜ್ಜಿ, ಚಂದ್ರವಳ್ಳಿ, ಆಡುಮಲ್ಲೇಶ್ವರ ಸ್ಥಳಗಳು ವಿಹಾರೋದ್ಯಮಗಳಾಗಿ, ಜೋಗಿಮಟ್ಟಿಯು ಒಂದು ಗಿರಿಧಾಮವಾಗಿದೆ.

**ಪ್ರವಾಸೋದ್ಯಮ ನೆಲೆಯಾಗಿ ಜೋಗಿಮಟ್ಟಿ**

ಕರ್ನಾಟಕದ ಗಿರಿಧಾಮಗಳಾದ ದೇವರಾಯನದುರ್ಗ, ಸಿದ್ದರಬೆಟ್ಟ, ನಂದಿದುರ್ಗ, ಕೊಡಚಾದ್ರಿ, ಮುಳ್ಳಯ್ಯನಗಿರಿ ಸಾಲುಗಳಲ್ಲಿ ಜೋಗಿಮಟ್ಟಿಯನ್ನು ಗುರ್ತಿಸಬಹುದಾಗಿದೆ. ಜೋಗಿಮಟ್ಟಿಯು ರಜಾ ತಾಣವಾಗಿ, ಪ್ರವಾಸಿಗರ ಸ್ವರ್ಗವಾಗಿ, ಹಸಿರುತೇರಿನೊಂದಿಗೆ ದುರ್ಗದ ಐಸಿರಿಯಾಗಿ ಕಣ್ಮನ ಸೆಳೆಯುವ ಸೋಜಿಗಲ್ಲಾಗಿದೆ. ಪ್ರಶಾಂತತೆ, ಸೋಜಿಗ, ಎತ್ತ ನೋಡಿದರೂ ಮುಗಿಲೆತ್ತರದ ಬೆಟ್ಟ, ಕೋಡುಗಲ್ಲುಗಳಿಂದ ಸುತ್ತುವರೆದಿರುವ ನೈಸರ್ಗಿಕ ನೆಲೆಯ ಉತ್ತುಂಗ ಶಿಖರ ಜೋಗಿಮಟ್ಟಿಯಾಗಿದೆ. ಚಳಿಗಾಲ, ಮಳೆಗಾಲ, ಬೇಸಿಗೆ ಕಾಲಗಳಲ್ಲೂ ಸಹ ಪ್ರವಾಸಿಗರನ್ನು ಆಕರ್ಷಿಸುವ ಸೊಬಗಿನ ತಾಣವಾಗಿದೆ.

ಇತ್ತೀಚಿನ ದಿನಗಳಲ್ಲಿ ಪ್ರವಾಸೋದ್ಯಮ ಆಕರ್ಷಣೆಗಳಲ್ಲಿ ನೈಸರ್ಗಿಕ ಸುಂದರ ಪರಿಸರ ತಾಣಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಅದರಲ್ಲಿಯೂ ಪ್ರಕೃತಿ ಸೊಬಗು ಅತಿ ಹೆಚ್ಚು ಅಕರ್ಷಣಿಯಾವಾಗಿದೆ. 21ನೇ ಶತಮಾನದ ಈ ಜಾಗತೀಕರಣ ಯುಗದಲ್ಲಿ ಜನರು ಹೆಚ್ಚು ಒತ್ತಡಗಳಿಂದ ಬದುಕುತ್ತಿರುವುದರಿಂದ ಆಗಾಗ್ಗೆ ಇಂತಹ ಸ್ಥಳಗಳಿಗೆ ಭೇಟಿ ನೀಡಿ ದಣಿವಾರಿಸಿಕೊಂಡು ವಿಶ್ರಾಂತಿ ಪಡೆದು, ಮನೋರಂಜನೆಗಾಗಿ ಈ ಸ್ಥಳಗಳತ್ತ ಧಾವಿಸುತ್ತಿರುವುದನ್ನು ಗಮನಿಸಬಹುದಾಗಿದೆ. ಇಂತಹ ಸ್ಥಳಗಳಲ್ಲಿ ಬರದ ನಾಡು, ಕೋಟೆನಾಡು ಎಂದು ಪ್ರಖ್ಯಾತಿ ಪಡೆದಿರುವ ಚಿತ್ರದುರ್ಗಕ್ಕೆ ಹೊಂದಿಕೊಂಡಂತೆ ಇರುವ ಸ್ಥಳವೇ ಈ ಜೋಗಿಮಟ್ಟಿ. ಚಿನ್ಮೂಲಾದ್ರಿ ಬೆಟ್ಟಗಳ ಸಾಲಿನಲ್ಲಿ ನಿಸರ್ಗ ಸೌಂದರ್ಯದ ನೆಲೆಯಾಗಿರುವ ಈ ಪ್ರದೇಶವನ್ನು ಜೋಗಿಮಟ್ಟಿ ಶಿಖರ ಎಂದುಕರೆಯುತ್ತಾರೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಇರುವ ಪ್ರಖ್ಯಾತವಾದ ಗಿರಿಧಾಮ ಜೋಗಿಮಟ್ಟಿ ಇದು ಚಿತ್ರದುರ್ಗದಿಂದ ಸುಮಾರು 10 ಕಿ.ಮೀ ದೂರದಲ್ಲಿದೆ. ಇದು ಸಮುದ್ರಮಟ್ಟದಿಂದ ಸುಮಾರು 1323 ಮೀಟರ್ಎತ್ತರದಲ್ಲಿದೆ. ಜನೋಪಕಾರಿಯಾದ ಜೋಗಿಯೊಬ್ಬರು ಈ ಪ್ರದೇಶದಲ್ಲಿ ನೆಲೆಸಿದ್ದಕಾರಣ ಈ ಪ್ರದೇಶಕ್ಕೆ ಜೋಗಿಮಟ್ಟಿ ಎಂದು ಹೆಸರು ಬಂದಿದೆ. ಈತನ ಸಮಾಧಿಯು ಇಲ್ಲಿದೆ.[1]

[1]ಕ್ಷೇತ್ರಕಾರ್ಯ: ಜೋಗಿಮಟ್ಟಿ, ದಿನಾಂಕ: 10–07–2024

ಜೋಗಿಮಟ್ಟಿ ಒಂದು ಗಿರಿಧಾಮವಾಗಿದ್ದು, ಸುಂದರವಾದ ಅರಣ್ಯದಿಂದ ಕೂಡಿದೆ. ಇದು ಜಿಲ್ಲೆಯಲ್ಲಿ 3,87,993 ಚದರ ಮೈಲಿ ಕಾಯ್ದಿರಿಸಿದ ಅರಣ್ಯವನ್ನು ಹೊಂದಿದೆ. ಇದು ಬಹಳ ಮನೋಹರವಾದ ಅರಣ್ಯ ಪ್ರದೇಶವಾಗಿದ್ದು, ಇಲ್ಲಿ ಬ್ರಿಟಿಷರಿಂದ ನಿರ್ಮಿತವಾದ ಒಂದು ಬಂಗಲೆ ಇದೆ. ಇದಕ್ಕೆ ಹತ್ತಿರದಲ್ಲಿ ಜೋಗಿ ಎಂಬ ಸನ್ಯಾಸಿಯ ಮಠವಿದೆ. ಇದಕ್ಕೆ ಹೊಂದಿಕೊಂಡಂತೆ ಆಡುಮಲ್ಲೇಶ್ವರ ಪ್ರಾಣಿ ಸಂಗ್ರಾಹಾಲಯವಿದ್ದು, ಇದು ಭಾರತದ ಕೇಂದ್ರಿಯ ಪ್ರಾಣಿ ಸಂಗ್ರಹಾಲಯ ನಿಯಂತ್ರಣಕ್ಕೆ ಒಳಪಟ್ಟಿದೆ. 2010ರಲ್ಲಿ ಪರಿಸರ ಪ್ರವಾಸೋದ್ಯಮ ತಾಣವಾಗಿ ಇದನ್ನು ತೆರೆಯಲಾಯಿತು.

ಜೋಗಿಮಟ್ಟಿ ಜಿಲ್ಲೆಯಲ್ಲಿಯೇ ಅತೀ ಎತ್ತರದ ಪ್ರದೇಶವಾಗಿದೆ. ಜೊತೆಗೆ ತಂಗಾಳಿ ಬೀಸುವ ತಣ್ಣಗಿನ ಸ್ಥಳವಾಗಿರುವುದರಿಂದ ಇದು ಚಿತ್ರದುರ್ಗದ ಊಟಿ ಅಥವಾ ಬಡವರ ಊಟಿ ಎಂದೇ ಪ್ರಖ್ಯಾತವಾಗಿದೆ. ಇದು ದಟ್ಟವಾದ ಅರಣ್ಯದಿಂದ ಆವೃತ್ತವಾಗಿದೆ. ಈ ಅರಣ್ಯದ ಬಗ್ಗೆ 1935ರಲ್ಲಿ ಬ್ರಿಟಿಷ್ ಅಧಿಕಾರಿ ಸಾಹಸಿ ಬೇಟೆಗಾರನಾದ ಕೆನೆತ್ ಆ್ಯಂಡ್ರಿಸನ್‌ರವರು ಚಿತ್ರದುರ್ಗ ಜಿಲ್ಲೆಯ ಜೋಗಿಮಟ್ಟಿಯ ಬೆಟ್ಟದ ಭಯಾನಕ ಕಾಡುಗಳ ಚಿತ್ರಗಳ ವಿವರಣೆಯನ್ನು ನೀಡಿದ್ದಾರೆ.

ಜೋಗಿಮಟ್ಟಿಯಲ್ಲಿ ದಟ್ಟವಾದ ಅರಣ್ಯದಲ್ಲಿ ಕಾಡು ಪ್ರಾಣಿಗಳಿವೆ. 1950ರವರೆಗೂ ಹುಲಿಗಳು ಸಹ ಇದ್ದವು. ಈ ಅರಣ್ಯ ಪ್ರದೇಶದಲ್ಲಿ ಔಷಧಿಯ ಗಿಡಮೂಲಿಕೆಗಳು ಸಹ ಇವೆ. 2018ರಲ್ಲಿ ಜೋಗಿಮಟ್ಟಿಯನ್ನು ಮಿನಿ ಊಟಿ, ಸುಂದರವಾದ ಸಸ್ಯಕಾಶಿ ಎಂದು ಕರೆಯುತ್ತಾರೆ.[2] ಮಿನಿ ಊಟಿ ಎಂದು ಕರೆಯುವ ಜೋಗಿಮಟ್ಟಿ ಎತ್ತ ನೋಡಿದ ಕಡೆ ಎಲ್ಲಾ ಹಚ್ಚಹಸಿರಿನಿಂದ ಕೂಡಿದ ನಿತ್ಯ ಮನೋಹರ ದೃಶ್ಯಗಳಿವೆ. ಹಕ್ಕಿಪಕ್ಷಿಗಳು ಚಿಲಿ–ಪಿಲಿ ಜಂಕಾರ ಗಿರಿ ಶಿಖರ ತುದಿಗೆ ಮೋಡಗಳು ಮುತ್ತಿಕ್ಕುತಿರುವಂತೆ ಕಾಣುತ್ತವೆ. ಇಲ್ಲಿ ಪವನಶಕ್ತಿಯನ್ನು ಉತ್ಪಾದಿಸಲಾಗುತ್ತದೆ. ಇದು ಜಗತ್ತಿನ ಎರಡನೇ ಪವನಶಕ್ತಿ ಉತ್ಪಾದನ ಸ್ಥಳವಾಗಿದೆ. ಪರ್ವತ ಶ್ರೇಣಿ– ಕಲ್ಲುಗುಡ್ಡಗಳಿಂದ ಕೂಡಿದ ಮರಗಿಡಗಳು ಕಣ್ಣಿಗೆ ಕಾಣುತ್ತವೆ. ಮಳೆಗಾಲದಲ್ಲಿ ಹೆಚ್ಚಿನ ಮಳೆಯನ್ನು ಕಾಣಲಾಗುತ್ತದೆ. ಸುಮಾರು ಈ ಪ್ರದೇಶವು 22 ಸಾವಿರ ಎಕರೆ ಇದೆ. ಹಾಗೂ ಅತೀ ಹೆಚ್ಚು ಗಾಳಿ ಬೀಸುವ ಸ್ಥಳವಾಗಿದೆ. ಬಿಸಲಿನ ನಾಡಾದ ಚಿತ್ರದುರ್ಗದ ಜೋಗಿಮಟ್ಟಿಯಲ್ಲಿ ಬೆಲೆಬಾಳುವ ಮರಗಳಾದ ಜಾಲಿ, ತೇಗ, ಗಂಧ, ಹೊನ್ನೆ, ಬೀಟೆ ಮುಂತಾದ ವಿವಿಧ ರೀತಿಯ ಮರಗಳು ಕಾಣಬಹುದು. ಹಾಗಾಗಿ ಇಲ್ಲಿ ಜಿಂಕೆ, ಮೊಲ, ನರಿ, ಗಿಳಿ, ಗೊರವಂಕ, ಮುಳ್ಳು ಹಂದಿ, ಚಿಪ್ಪು ಹಂದಿ, ಹುಲಿ, ನವಿಲು ಮುಂತಾದ ಪ್ರಾಣಿ–ಪಕ್ಷಿಗಳು ಕಂಡುಬರುತ್ತವೆ. ಈ ಪ್ರದೇಶದಲ್ಲಿ ಸುಮಾರು 250ಕ್ಕೂ ಹೆಚ್ಚು ವಿವಿಧ ಪ್ರಭೇದದ ಔಷಧಿ ಸಸ್ಯಗಳಿವೆ. 1905ರಲ್ಲಿ ಬ್ರಿಟಿಷರು ಇಲ್ಲಿ ಒಂದು ಬಂಗಲೆಯನ್ನು ನಿರ್ಮಿಸಿದ್ದರು. ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರವರು ಬೇಸಿಗೆ ಕಾಲದಲ್ಲಿ ಇಲ್ಲಿಗೆ ಬಂದು ವಿಶ್ರಾಂತಿಯನ್ನು ಪಡೆಯುತ್ತಿದ್ದರು. ಇಂದಿಗೂ ಸಹ ಇಲ್ಲಿ ಅತಿಥಿ ಗೃಹ ಇರುವುದನ್ನು ಕಾಣಬಹುದು.

ಈ ಪ್ರಾಂತ್ಯ ಪರಿಸರದಲ್ಲಿ ತಂಪಾದ ವಾತವರಣ ಇರುತ್ತದೆ. ಪ್ರವಾಸಿಗರು ಈ ಗುಡ್ಡದ ತಪ್ಪಲಿನಿಂದಲೇ ತಣ್ಣನೆ ಗಾಳಿಯನ್ನು ಸವಿಯುತ್ತ ಪ್ರಯಾಣವನ್ನು ಆರಂಭಿಸುತ್ತಾರೆ. ರಸ್ತೆಯ ಎರಡು ಬದಿಯಲ್ಲಿ ದಟ್ಟವಾದ

---

[2]ಸಂದರ್ಶನ: ಯಶೋಧ, ಇತಿಹಾಸ ಪ್ರಾಧ್ಯಾಪಕರು, ಚಿತ್ರದುರ್ಗ, ದಿನಾಂಕ: 10–07–2024

ಗಿಡಮರಗಳಿವೆ. ಎತ್ತ ನೋಡಿದರೂ ಹಚ್ಚಹಸಿರು ಇದರ ನಡುವೆ ಜೋರಾಗಿ ಬೀಸುವ ಗಾಳಿ ಮೈಮನಕ್ಕೆ ಮುದವನ್ನು ನೀಡುತ್ತದೆ. ಮುಂದೆ ಸಾಗಿದರೆ ಬ್ರಿಟಿಷ್ ಕಾಲದ ಬಂಗಲೆ ಇದೆ, ಇದರ ಸುತ್ತಲು ಉದ್ಯಾನವನವನ್ನು ನಿರ್ಮಿಸಲಾಗಿದೆ. ಈ ಅತಿಥಿ ಗೃಹದಲ್ಲಿ ಕೊಠಡಿಗಳು ಬಾಡಿಗೆಗೆ ದೊರೆಯುತ್ತವೆ. ಪ್ರವಾಸಿಗರು ವಿಶ್ರಾಂತಿ ತೆಗಿದುಕೊಳ್ಳಲು ಅವಕಾಶವಿದೆ. ಪ್ರವಾಸಗರು ತಿಂಡಿ–ತಿನಸುಗಳನ್ನು ಕುಳಿತು ಸೇವಿಸಲು ಉದ್ಯಾನವನದಲ್ಲಿ ಸ್ಥಳವಾಕಾಶವಿದೆ.

ಇಲ್ಲಿ ಜೋಗಿ ಸಿದ್ದೇಶ್ವರ ಸ್ವಾಮಿ ಗದ್ದುಗೆಯಿದೆ. ಈ ಗದ್ದುಗೆಯನ್ನು ತಲುಪಲು ಸುಮಾರು 150 ಮೆಟ್ಟಲುಗಳನ್ನು ದಾಟಿ ತಲುಪಬೇಕಾಗುತ್ತದೆ. ಅಲ್ಲಿಂದ ಮುಂದೆ ಸಾಗಿದರೆ ವಾಚ್ ಟೌವರ್ ಕಾಣಿಸುತ್ತದೆ. ಈ ವಾಚ್ ಟೌವರ್ ಮೇಲಿಂದ ವೀಕ್ಷಿಸಿದರೆ ಸುಂದರ, ಮನೋಹರವಾದ ದೃಶ್ಯ ಮೈಮನವನ್ನ ಸೆಳೆಯುತ್ತದೆ. ಇಲ್ಲಿ ಸುಂದರವಾದ ಜಲಪಾತವಿದೆ, ಇದನ್ನು ಹಿಮವತಕ್ಕೇದಾರ ಅಥವಾ ಹಿಮವಂತಕೇದಾರ ಎಂದು ಕರೆಯುತ್ತಾರೆ. ಸುಮಾರು 1 ಕಿ.ಮೀ ಕಚ್ಚಾ ರಸ್ತೆಯಲ್ಲಿ ನಡೆದು ಸಾಗಿದರೆ ಈ ಜಲಪಾತವನ್ನು ತಲುಪಬಹುದು ಇದಕ್ಕೆ ಹೊಂದಿಕೊಂಡಂತೆ ಒಂದು ಗುಹೆ ಇದೆ. ಈ ಗುಹೆಯಲ್ಲಿ ಶಿವಲಿಂಗವೂ ಸಹ ಇದೆ. ಜಲಪಾತದಿಂದ ಧುಮುಕುವ ನೀರು ಲಿಂಗದ ಮೇಲೆ ಬಿದ್ದು ಮುಂದೆ ಹರಿಯುತ್ತದೆ, ಈ ದೃಶ್ಯ ನೋಡಲು ಬಹಳಷ್ಟು ಮನೋಹರವಾಗಿರುತ್ತದೆ.[3] ಇಲ್ಲಿ ಪ್ರವಾಸಿಗರು ತುಂಬ ಖುಷಿಯಿಂದ ಜಲಪಾತದಲ್ಲಿ ಮಿಂದೇಳುತ್ತಾರೆ.

ಬಿಸಿಲ ಬರದ ನಾಡಿನಲ್ಲಿ ಈ ಸುಂದರ, ರಮಣೀಯ ನಿಸರ್ಗದ ತಾಣದಲ್ಲಿ ಹಲವಾರು ಚಲನಚಿತ್ರಗಳನ್ನು ಚಿತ್ರೀಕರಣ ಮಾಡಲಾಗಿದೆ. ಸೊಬಗಿಗೆ ಮನಸೋತ, ಖ್ಯಾತ ನಿರ್ದೇಶಕ ಪುಟ್ಟಣ್ಣ ಕಣಗಾಲ್‌ರವರು 'ನಾಗರಹಾವು' ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ಬಾರೆ ಬಾರೇ ಚೆಂದದ ಚೆಲುವಿನ ತಾರೆ' ಎಂಬ ಹಾಡನ್ನು ಸ್ಲೋಮೊಷನ್‌ನಲ್ಲಿ ಬಹಳ ಆಕರ್ಷಕವಾಗಿ ಚಿತ್ರಿಕರಿಸಿರುವುದನ್ನು ಸ್ಮರಿಸಬಹುದು.

ಚಿತ್ರದುರ್ಗದ ಖ್ಯಾತ ವಿದ್ವಾಂಸರೂ ಸಾಹಿತಿಯೂ ಆದ ಬಿ.ಎಲ್.ವೇಣುರವರು "ಹಗಲು ಕಗ್ಗೊಲೆ ಮಾನ್ಯ ರಾಜಾ ಮತ್ತಿ ತಿಮ್ಮಣ್ಣನಾಯಕ" ಹಾಗೂ "ಮಹಾ ಮಾತೃಶ್ರೀ ಚಿತ್ರದುರ್ಗದ ವೀರರಾಣಿ ಓಬವ್ವ ನಾಗತಿ" ಕಾದಂಬರಿಗಳಲ್ಲಿ ಜೋಗಿಮಟ್ಟಿಯ ಸೌಂದರ್ಯವನ್ನು ರಮಣೀಯವಾಗಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಬರದನಾಡದ ಚಿತ್ರದುರ್ಗದಲ್ಲಿ ಜೋಗಿಮಟ್ಟಿ ಎಂಬ ನೈಸರ್ಗಿಕ ವಿಹಾರಧಾಮ ಇರುವುದು ಒಂದು ವೈಶಿಷ್ಟ, ಇಂದಿಗೂ ಸಹ ಚಿತ್ರದುರ್ಗದ ಸ್ಥಳೀಯರು "ಸ್ವರ್ಗ ನಮ್ಮ ದುರ್ಗ" ಎಂದು ಸಂತೋಷದಿಂದ ಹೇಳುವುದಕ್ಕೆ ಈ ಜೋಗಿಮಟ್ ಒಂದು ಕಾರಣವಾಗಿದೆ.

**ಪರಾಮರ್ಶನ ಗ್ರಂಥಗಳು**


- ಗಂಡುಗಲಿ, ಟಿ.ಎಸ್. (1995). *ನೋಡಬನ್ನಿ ಚಿತ್ರದುರ್ಗ.* ಮದಕರಿ ಪ್ರಕಾಶನ, ಚಿತ್ರದುರ್ಗ.
- ಗೋಪಾಲ್, ಆರ್. (ಸಂ.) (2006). *ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ.* ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ.


[3]ಕ್ಷೇತ್ರಕಾರ್ಯ: ಜೋಗಿಮಟ್ಟಿ, ದಿನಾಂಕ: 22–07–2024

- ಕೃಷ್ಣನ್, ಎನ್.ವಿ., ವೆಂಕಣ್ಣಾಚಾರ್, ಕೆ. (2009). *ಚಿತ್ರದುರ್ಗ ಮಾರ್ಗದರ್ಶಿ.* ದೀಪಕ್ ಬುಕ್‌ಹೌಸ್, ಚಿತ್ರದುರ್ಗ.
- ಶ್ರೀಸತ್ಯನ್, ಬಿ.ಎನ್. (1967). ಮೈಸೂರು ಸ್ಟೇಟ್ ಗೆಜೆಟೀಯರ್ ಚಿತ್ರದುರ್ಗ ಡಿಸ್ಟ್ರೀಕ್ಟ್. ಗೌವರ್ನಮೆಂಟ್ ಪ್ರೆಸ್, ಬೆಂಗಳೂರು.
- ವಾರ್ಷಿಕ ವರದಿಗಳು. ಕರ್ನಾಟಕ ಪ್ರವಾಸೋದ್ಯಮ ಇಲಾಖೆ, ಬೆಂಗಳೂರು.